FRNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-III<br>Part-III | ಬೆಂಗಳೂರು, ಗುರುವಾರ, ಮೇ ೨, ೨೦೧೯ (ವೈಶಾಖ ೧೨, ಶಕ ವರ್ಷ ೧೯೪೦)<br>Bengaluru, Thursday, May 2, 2019 (Vaisakha 12, Shaka Varsha 1940) | ನಂ. ೩೨೭<br>No. 327 |
|---|---|---|

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

1ನೇ ಮಹಡಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ಕಟ್ಟಡ (ಹಿಂಭಾಗ), ನಂ. 8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52.

**ಆದೇಶ**

**ಸಂಖ್ಯೆ: ರಾಚುಆ:76:ಇಯುಬಿ:2019, ಬೆಂಗಳೂರು, ದಿನಾಂಕ: 02-05-2019**

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು 1977ರ ನಿಯಮ 3(1) ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರದ ಮೇರೆಗೆ ಈ ಆದೇಶದ ಅನುಬಂಧದಲ್ಲಿರುವ 63 (8 ನಗರಸಭೆಗಳು, 33 ಪುರಸಭೆಗಳು ಹಾಗೂ 22 ಪಟ್ಟಣ ಪಂಚಾಯಿತಿಗಳು) ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಗೆ ನಮೂದಿಸಿರುವ ಚುನಾವಣಾ ವೇಳಾಪಟ್ಟಿಯಂತೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ಆದೇಶಿಸಿದೆ.

**ಚುನಾವಣಾ ವೇಳಾ ಪಟ್ಟಿ**

| | | |
|---|---|---|
| 1 | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 09-05-2019 (ಗುರುವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 16-05-2019 (ಗುರುವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 17-05-2019 (ಶುಕ್ರವಾರ) |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 20-05-2019 (ಸೋಮವಾರ) |
| 5 | ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ) | **29-05-2019** (ಬುಧವಾರ) |
| 6 | ಮರು ಮತದಾನ ಇದ್ದಲ್ಲಿ ಮತದಾನ ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ) | 30-05-2019 (ಗುರುವಾರ) |
| 7 | ಮತಗಳ ಎಣಿಕೆಯ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಗಂಟೆಯಿಂದ) (ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ) | 31-05-2019 (ಶುಕ್ರವಾರ) |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 31-05-2019 (ಶುಕ್ರವಾರ) |

**ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಚುನಾವಣಾ ನೀತಿ ಸಂಹಿತೆಯು ತಕ್ಷಣದಿಂದ ಜಾರಿಗೆ ಬಂದಿದ್ದು ದಿನಾಂಕ: 31-05-2019 ರವರೆಗೆ ಜಾರಿಯಲ್ಲಿರುತ್ತದೆ.**

ಜಿಲ್ಲಾಧಿಕಾರಿಗಳು ಆಯೋಗವು ಆದೇಶಿಸಿದ ಚುನಾವಣಾ ವೇಳಾಪಟ್ಟಿಯನ್ನು ಅನುಸರಿಸಿ ಕರ್ನಾಟಕ ಪೌರಸಭೆಗಳ (ಕೌನ್ಸಿಲರುಗಳ ಚುನಾವಣೆ) ನಿಯಮಗಳು, 1977ರ ನಿಯಮ 8ರ ಪ್ರಕಾರ ಚುನಾವಣೆ ನಡೆಯುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಚುನಾವಣಾ ಅಧಿಸೂಚನೆಯನ್ನು ಪ್ರಪತ್ರ-1 ರಲ್ಲಿ ಹೊರಡಿಸತಕ್ಕದ್ದು. ಚುನಾವಣಾ ಅಧಿಸೂಚನೆಯ ಅನುಬಂಧದಲ್ಲಿ ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಯ ಹೆಸರು, ವಾರ್ಡಿನ ಸಂಖ್ಯೆ, ಮೀಸಲಾತಿ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವುದು. ಹೊರಡಿಸಲಾದ ಅಧಿಸೂಚನೆಯನ್ನು ಅದೇ ದಿನದಂದು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು. ಅಧಿಸೂಚನೆಯ ಪ್ರತಿಗಳನ್ನು ಜಿಲ್ಲಾಧಿಕಾರಿ ಕಛೇರಿ, ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳ ಕಛೇರಿ ಹಾಗೂ ಇನ್ನಿತರ ಮುಖ್ಯ ಸ್ಥಳಗಳಲ್ಲಿಯೂ ಸಹಾ ಪ್ರದರ್ಶಿಸತಕ್ಕದ್ದು ಹಾಗೂ ಆಯೋಗಕ್ಕೆ ಅಂದೇ ಇ-ಮೇಲ್ ಮೂಲಕ ಕಳುಹಿಸುವುದು.

ಅಧಿಸೂಚನೆಯ ಪ್ರತಿಯನ್ನು ಸಂಬಂಧಿಸಿದ ಚುನಾವಣಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ದಿನದಂದು ಪ್ರಪತ್ರ-1ಎ ರಲ್ಲಿ ಚುನಾವಣಾ ನೋಟೀಸನ್ನು ಪ್ರಕಟಿಸುವಂತೆ ಹಾಗೂ ಚುನಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ಸೂಚಿಸುವುದು. ಚುನಾವಣಾ ವೇಳಾಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಪತ್ರಿಕೆಗಳಲ್ಲಿ (ವೆಚ್ಚ ಬಾರದಂತೆ) ಪ್ರಕಟಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

**ವಿಶೇಷ ಸೂಚನೆ :-**

1. ಈಗಾಗಲೇ ನೀಡಿರುವ ನಿರ್ದೇಶನಗಳಂತೆ, ಚುನಾವಣೆ ನಡೆಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಾಲಿ ಚಾಲ್ತಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ತಯಾರಿಸಲಾಗುವ ಮತದಾರರ ಪಟ್ಟಿಯಂತೆ ಚುನಾವಣೆ ನಡೆಸುವುದು.
2. ಚುನಾವಣೆ ನಡೆಸಲಾಗುವ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಗೆ ಸೂಕ್ತ ತರಬೇತಿಯನ್ನು ನೀಡುವುದು ಮತ್ತು ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ, ಸುತ್ತೋಲೆ ಹಾಗೂ ನಿರ್ದೇಶನ ಪತ್ರಗಳ ಪ್ರತಿಯನ್ನು ನೀಡುವುದು.
3. **ಘೋಷಣಾ ಪತ್ರ / ಪ್ರಮಾಣಪತ್ರ:** ಮತದಾರನಿಗೆ ಅಭ್ಯರ್ಥಿಯ ಪೂರ್ವಾಪರಗಳನ್ನು ತಿಳಿದುಕೊಳ್ಳಲು ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯು ನಾಮಪತ್ರದೊಂದಿಗೆ, ತನ್ನ ಹಿನ್ನೆಲೆ, ಚರಾಸ್ತಿ ಮತ್ತು ಸ್ಥಿರಾಸ್ತಿಗಳ ವಿವರಗಳು, ತನ್ನ ಸ್ವವಿವರ, ವಿದ್ಯಾರ್ಹತೆ ಆದಾಯದ ಮೂಲಗಳನ್ನು ಪರಿಷ್ಕೃತ ನಮೂನೆಯಲ್ಲಿ ಘೋಷಣಾ ಪತ್ರ / ಪ್ರಮಾಣ ಪತ್ರ (Affidavit) ಸಲ್ಲಿಸಬೇಕಾಗಿರುತ್ತದೆ.
4. ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ಗಮನಕ್ಕೆ ಬಂದಾಗ ಆಯೋಗದ ಆದೇಶ ಸಂಖ್ಯೆ:ಎಸ್‌ಇಸಿ.10. ಎಂಐಎಸ್‌ಸಿ.2016 ದಿನಾಂಕ: 29.06.2016 ಹಾಗೂ ತಿದ್ದುಪಡಿ ದಿನಾಂಕ: 06.07.2016 ರಂತೆ ಕ್ರಮವಹಿಸುವುದು.
5. ಕಾಲಕಾಲಕ್ಕೆ ಚುನಾವಣೆಗೆ ಸಂಬಂಧಿಸಿದ ವರದಿಯನ್ನು ಆಯೋಗಕ್ಕೆ ಸಲ್ಲಿಸುವುದು.
6. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ.14.ಇಯುಬಿ.2017 ದಿನಾಂಕ: 10.03.2017 ರಂತೆ ಮತಪತ್ರದಲ್ಲಿ "NOTA" ಅವಕಾಶ ಕಲ್ಪಿಸುವುದು.
7. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ.28.ಇಯುಬಿ.2018 ದಿನಾಂಕ: 01.06.2018 ರಂತೆ ಮತಪತ್ರದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರಿನ ಮುಂದೆ ಅವರ ಇತ್ತೀಚಿನ ಭಾವಚಿತ್ರ ಮುದ್ರಿಸುವಂತೆ ಕ್ರಮ ಕೈಗೊಳ್ಳುವುದು.

ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿರುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಸದಾಚಾರ ಸಂಹಿತೆಯು ಯಾವುದೇ ರೀತಿಯಲ್ಲೂ ಉಲ್ಲಂಘನೆಯಾಗದಂತೆ ನೋಡಿಕೊಳ್ಳತಕ್ಕದ್ದು.

ಆದೇಶಾನುಸಾರ

**ನಾಗರಾಜು. ಎನ್.ಆರ್.**
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.
ಬೆಂಗಳೂರು

# ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ ಚುನಾವಣೆ, 2019

## ಅನುಬಂಧ

## ಸಂಖ್ಯೆ: ರಾಚುಆ/76/ಇಯುಬಿ/2019, ದಿನಾಂಕ: 02-05-2019

| ಕ್ರ ಸಂ. | ಜಿಲ್ಲೆ | ಕ್ರ ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಒಟ್ಟು ವಾರ್ಡುಗಳ ಸಂಖ್ಯೆ |
|---|---|---|---|---|---|
| 1 | 2 | 3 | | | 4 |
| 1 | ಬೆಂಗಳೂರು ನಗರ | 1 | ಆನೇಕಲ್ | ಪುರಸಭೆ | 27 |
| 2 | ಬೆಂಗಳೂರು (ಗ್ರಾ) | 2 | ದೇವನಹಳ್ಳಿ | ಪುರಸಭೆ | 23 |
| | | 3 | ನೆಲಮಂಗಲ | ಪುರಸಭೆ | 23 |
| 3 | ಚಿತ್ರದುರ್ಗ | 4 | ಹಿರಿಯೂರು | ನಗರಸಭೆ | 31 |
| | | 5 | ಮೊಳಕಾಲ್ಮೂರು | ಪಟ್ಟಣ ಪಂಚಾಯತಿ | 16 |
| | | 6 | ಹೊಳಲ್ಕೆರೆ | ಪಟ್ಟಣ ಪಂಚಾಯತಿ | 16 |
| 4 | ದಾವಣಗೆರೆ | 7 | ಹರಿಹರ | ನಗರಸಭೆ | 31 |
| 5 | ಕೋಲಾರ | 8 | ಬಂಗಾರಪೇಟೆ | ಪುರಸಭೆ | 27 |
| | | 9 | ಶ್ರೀನಿವಾಸಪುರ | ಪುರಸಭೆ | 23 |
| | | 10 | ಮಾಲೂರು | ಪುರಸಭೆ | 27 |
| 6 | ಚಿಕ್ಕಬಳ್ಳಾಪುರ | 11 | ಶಿಡ್ಲಘಟ್ಟ | ನಗರಸಭೆ | 31 |
| | | 12 | ಬಾಗೇಪಲ್ಲಿ | ಪುರಸಭೆ | 23 |
| 7 | ಶಿವಮೊಗ್ಗ | 13 | ಸಾಗರ | ನಗರಸಭೆ | 31 |
| | | 14 | ಶಿಕಾರಿಪುರ | ಪುರಸಭೆ | 23 |
| | | 15 | ಶಿರಾಳಕೊಪ್ಪ | ಪಟ್ಟಣ ಪಂಚಾಯತಿ | 17 |
| | | 16 | ಸೊರಬ | ಪಟ್ಟಣ ಪಂಚಾಯತಿ | 12 |
| | | 17 | ಹೊಸನಗರ | ಪಟ್ಟಣ ಪಂಚಾಯತಿ | 11 |
| 8 | ತುಮಕೂರು | 18 | ತಿಪಟೂರು | ನಗರಸಭೆ | 31 |
| | | 19 | ಪಾವಗಡ | ಪುರಸಭೆ | 23 |
| | | 20 | ಕುಣಿಗಲ್ | ಪುರಸಭೆ | 23 |
| | | 21 | ತುರುವೇಕೆರೆ | ಪಟ್ಟಣ ಪಂಚಾಯತಿ | 14 |
| 9 | ಮೈಸೂರು | 22 | ನಂಜನಗೂಡು | ನಗರಸಭೆ | 31 |
| | | 23 | ಕೆ.ಆರ್.ನಗರ | ಪುರಸಭೆ | 23 |
| | | 24 | ಬನ್ನೂರು | ಪುರಸಭೆ | 23 |
| 10 | ಚಿಕ್ಕಮಗಳೂರು | 25 | ಕಡೂರು | ಪುರಸಭೆ | 23 |
| | | 26 | ಕೊಪ್ಪ | ಪಟ್ಟಣ ಪಂಚಾಯತಿ | 11 |
| | | 27 | ಶೃಂಗೇರಿ | ಪಟ್ಟಣ ಪಂಚಾಯತಿ | 11 |
| | | 28 | ಮೂಡಿಗೆರೆ | ಪಟ್ಟಣ ಪಂಚಾಯತಿ | 11 |
| | | 29 | ನರಸಿಂಹರಾಜಪುರ | ಪಟ್ಟಣ ಪಂಚಾಯತಿ | 11 |
| 11 | ದಕ್ಷಿಣ ಕನ್ನಡ | 30 | ಮೂಲ್ಕಿ | ಪಟ್ಟಣ ಪಂಚಾಯತಿ | 18 |
| | | 31 | ಮೂಡಬಿದಿರೆ | ಪುರಸಭೆ | 23 |
| | | 32 | ಸುಳ್ಯ | ಪಟ್ಟಣ ಪಂಚಾಯತಿ | 20 |
| 12 | ಹಾಸನ | 33 | ಆಲೂರು | ಪಟ್ಟಣ ಪಂಚಾಯತಿ | 11 |
| | | 34 | ಅರಕಲಗೂಡು | ಪಟ್ಟಣ ಪಂಚಾಯತಿ | 17 |
| 13 | ಮಂಡ್ಯ | 35 | ಮಳವಳ್ಳಿ | ಪುರಸಭೆ | 23 |
| | | 36 | ಕೆ.ಆರ್.ಪೇಟೆ | ಪುರಸಭೆ | 23 |
| | | 37 | ಶ್ರೀರಂಗಪಟ್ಟಣ | ಪುರಸಭೆ | 23 |

| ಕ್ರ ಸಂ. | ಜಿಲ್ಲೆ | ಕ್ರ ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಒಟ್ಟು ವಾರ್ಡುಗಳ ಸಂಖ್ಯೆ |
|---|---|---|---|---|---|
| 1 | 2 | 3 | | | 4 |
| 14 | ಚಾಮರಾಜನಗರ | 38 | ಗುಂಡ್ಲುಪೇಟೆ | ಪುರಸಭೆ | 23 |
| | | 39 | ಯಳಂದೂರು | ಪಟ್ಟಣ ಪಂಚಾಯತಿ | 11 |
| | | 40 | ಹನೂರು | ಪಟ್ಟಣ ಪಂಚಾಯತಿ | 13 |
| 15 | ವಿಜಯಪುರ | 41 | ತಾಳಿಕೋಟೆ | ಪುರಸಭೆ | 23 |
| | | 42 | ಬಸವನ ಬಾಗೇವಾಡಿ | ಪುರಸಭೆ | 23 |
| | | 43 | ಇಂಡಿ | ಪುರಸಭೆ | 23 |
| 16 | ಧಾರವಾಡ | 44 | ನವಲಗುಂದ | ಪುರಸಭೆ | 23 |
| | | 45 | ಕಲಘಟಗಿ | ಪಟ್ಟಣ ಪಂಚಾಯತಿ | 17 |
| | | 46 | ಅಳ್ನಾವರ | ಪಟ್ಟಣ ಪಂಚಾಯತಿ | 18 |
| 17 | ಗದಗ | 47 | ಮುಂಡರಗಿ | ಪುರಸಭೆ | 23 |
| | | 48 | ನರಗುಂದ | ಪುರಸಭೆ | 23 |
| 18 | ಹಾವೇರಿ | 49 | ಬ್ಯಾಡಗಿ | ಪುರಸಭೆ | 23 |
| | | 50 | ಶಿಗ್ಗಾಂವ್ | ಪುರಸಭೆ | 23 |
| 19 | ಉತ್ತರ ಕನ್ನಡ | 51 | ಭಟ್ಕಳ | ಪುರಸಭೆ | 23 |
| | | 52 | ಹೊನ್ನಾವರ | ಪಟ್ಟಣ ಪಂಚಾಯತಿ | 20 |
| | | 53 | ಸಿದ್ದಾಪುರ | ಪಟ್ಟಣ ಪಂಚಾಯತಿ | 15 |
| 20 | ಬೀದರ್ | 54 | ಬಸವಕಲ್ಯಾಣ | ನಗರಸಭೆ | 31 |
| | | 55 | ಭಾಲ್ಕಿ | ಪುರಸಭೆ | 27 |
| | | 56 | ಹುಮ್ನಾಬಾದ್ | ಪುರಸಭೆ | 27 |
| | | 57 | ಚಿಟಗುಪ್ಪ | ಪುರಸಭೆ | 23 |
| | | 58 | ಔರಾದ್ | ಪಟ್ಟಣ ಪಂಚಾಯತಿ | 20 |
| 21 | ಬಳ್ಳಾರಿ | 59 | ಕಮಲಾಪುರ | ಪಟ್ಟಣ ಪಂಚಾಯತಿ | 20 |
| | | 60 | ಸಂಡೂರು | ಪುರಸಭೆ | 23 |
| | | 61 | ಹೆಚ್.ಹಡಗಲಿ | ಪುರಸಭೆ | 23 |
| | | 62 | ಹರಪನಹಳ್ಳಿ | ಪುರಸಭೆ | 27 |
| 22 | ಯಾದಗಿರಿ | 63 | ಶಹಾಪುರ | ನಗರಸಭೆ | 31 |

ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.
ಬೆಂಗಳೂರು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50